

ಭತ್ತ ಮಲೆನಾಡ ರೈತರ ಮೂಢನಂಬಿಕೆ. ಅದನ್ನವರು ಬಿಟ್ಟಿಲ್ಲ. ಅನ್ನ ಅನ್ನ ಕೊಟ್ಟರೂ ಬಿಡಲಾರರು... ಬೇರೆ ಬೆಳೆಗಳೂ ... ಭತ್ತದ ಬೇರು ...

ಬದುಕಿನೊಂದಿಗೆ ಅಪ್ಪವಾಗಿ ಬೆಸೆದುಕೊಂಡ ಈ ಬೆಳೆಯ ಬಗ್ಗೆ ಅವರದ್ದು ಕರುಳ ಬಳ್ಳಿಯ ಸಂಬಂಧ. ನಷ್ಟದ ಬೆಳೆ ಎಂದು ಗೊತ್ತಿದ್ದರೂ ಒಪ್ಪತ್ತು ಉಂಡಾದರೂ ಭತ್ತವನ್ನೇ ಬೆಳೆಯುವ ರೈತರಿಗೆ ಅದನ್ನು ತೊರೆಯುವುದೆಂದರೆ ತಾತ-ಮುತ್ತಾತಂದಿರು ನಂಬಿಕೊಂಡು ಬಂದ ಸಂಪ್ರದಾಯವನ್ನು ಧಿಕ್ಕರಿಸಿದ ಅಪರಾಧಿಭಾವ. ಭತ್ತದ ಬಗ್ಗೆ ಅಷ್ಟು ಅನನ್ಯ ಭಕ್ತಿ.

ಭತ್ತ ಮಲೆನಾಡ ಮಡಿಲ ಮುಖ್ಯ ಬೆಳೆ. ಇದರ ಬೇರು ಅಲ್ಲಿನ ಆರ್ಥಿಕ-ಸಾಮಾಜಿಕ-ಸಾಂಸ್ಕೃತಿಕ ರಂಗಗಳಲ್ಲಿ ಆಳವಾಗಿ ವ್ಯಾಪಿಸಿದೆ. ಈ ಬೆಳೆಯ ಮೂಲಕ ಅಲ್ಲಿನ ಜನಜೀವನದ ಚಿತ್ರ ಬಿಡಿಸಹೊರಟರೆ ನಮ್ಮೆದುರು ತೆರೆದುಕೊಳ್ಳುವುದು ಆರೆಹೊಟ್ಟೆಯ, ಬೆಂದಿ ಬಿಸ್ಸಿಯ ಸಾಲದ ಹೊರೆಯಲ್ಲಿ ಮುದುಡಿಹೋದ ಅಪ್ಪಟ ರೈತರ ನ್ಯಾಯ ಬದುಕು. ಹೆಸರು, ವಿಳಾಸಗಳ ವ್ಯತ್ಯಾಸ ಹೊರತುಪಡಿಸಿದರೆ ದಕ್ಷಿಣ ಕನ್ನಡ, ಉತ್ತರ ಕನ್ನಡ, ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಗಳಲ್ಲಿನ ಭತ್ತ ಬೆಳೆಗಾರರ ಜೀವನಮಟ್ಟ ವಿಧಾನಗಳಲ್ಲಿ ಎದ್ದು ತೋರುವ ಅಂತರವಿಲ್ಲ.

ಚಿಕ್ಕಮಗಳೂರು

ದಕ್ಷಿಣಕನ್ನಡದ ಪೂರ್ವಭಾಗದಲ್ಲಿರುವ ಪಶ್ಚಿಮ ಘಟ್ಟದ ಸಾಲುಗಳನ್ನು ಹತ್ತಿ ಕೆಳಗೆ ಜಗಿದರೆ ನಾವು ಚಿಕ್ಕಮಗಳೂರಿನಲ್ಲಿ ಬಿದ್ದಿರುತ್ತೇವೆ. ಬಾಬಾಬುಡಾನ್ ಪರ್ವತ ಶ್ರೇಣಿಯನ್ನು ಕೇಂದ್ರವಾಗಿಟ್ಟುಕೊಂಡು ಸುತ್ತಲೂ ಹಬ್ಬಿಕೊಂಡಿರುವ ಚಿಕ್ಕಮಗಳೂರು ಸಮೃದ್ಧ ಅರಣ್ಯ ಸಂಪತ್ತು ಹಾಗೂ ಅಷ್ಟೇ ದಟ್ಟವಾಗಿ ಬಡತನವನ್ನು ಕಟ್ಟಿಕೊಂಡ ಜಿಲ್ಲೆ.

ಹೊರಗಿನವರಿಗೆ ಚಿಕ್ಕಮಗಳೂರು ಕಾಫಿಎಸ್ಟೇಟ್‌ಗಳ ಶ್ರೀಮಂತ ಕೃಷಿಕರ ತೊಟ್ಟಿಲು' ಎಂಬ ಕಲ್ಪನೆ ಇದ್ದರೂ ವಾಸ್ತವ ತೀರಾ ಭಿನ್ನವಾಗಿದೆ. ಚಿಕ್ಕಮಗಳೂರು, ಮೂಡಿಗೆರೆ,ಕೊಪ್ಪ ಹಾಗೂ ತರೀಕೆರೆಯ ಸ್ವಲ್ಪ ಭಾಗದಲ್ಲಿರುವ ಕಾಫಿ ಬೆಳೆಯುವ ಪ್ರದೇಶ ಹೊರತುಪಡಿಸಿದರೆ ಉಳಿದಂತೆ ಶೇಕಡ 70ರಷ್ಟು ಪ್ರದೇಶದಲ್ಲಿ ಭತ್ತವೇ ಪ್ರಧಾನ ಬೆಳೆ. ಕಾಫಿ ತಂದ ಶ್ರೀಮಂತಿಕೆ, ಭತ್ತ ತಂದ ಬಡತನ ಜತೆಯಾಗಿಯೇ ಇರುವ ಜಿಲ್ಲೆಯಿದು. ಕಡೂರು ಮತ್ತು ಆಸುಪಾಸಿನ ಪ್ರದೇಶಗಳಲ್ಲಿ ಬರದ ಬುಳ ಇನ್ನೂ ಆರಿಲ್ಲ.

ಮಲೆನಾಡ ಪ್ರದೇಶದಲ್ಲಿ ಸಮೃದ್ಧವಾಗಿ ಮಳೆ ಬಿದ್ದರೆ (ಸರಾಸರಿ 2,736ಮಿ.ಮೀ) ಬಯಲು ಸೀಮೆಯಲ್ಲಿ ಇದರ ಪ್ರಮಾಣ ತೀರಾ ಗೌಣ (804ಮಿ.ಮೀ) ಕಡಿಮೆ ಮಳೆ ಪ್ರದೇಶಗಳಲ್ಲಿ ರಾಗಿ ಜೋಳಗಳೇ ಪ್ರಮುಖ ಬೆಳೆ. ಆದರೆ ಜಿಲ್ಲೆಯ ಏಕೈಕ ನೀರಾವರಿ ಮೂಲ ಚಿಕ್ಕಪಳ್ಳಿಯಲ್ಲಿನ ಭದ್ರಾ ಜಲಾಶಯ. ಇದರ ಬಲದಂಡೆ ತರೀಕೆರೆ ತಾಲೂಕಿನಲ್ಲಿದ್ದು ಅಲ್ಲಿನ ಸುಮಾರು 10,000 ಎಕರೆ ಪ್ರದೇಶಕ್ಕೆ ನೀರುಣಿಸುತ್ತಿದೆ. ನೀರಾವರಿ ಮಟ್ಟಿಗೆ ಜಿಲ್ಲೆ ಇಷ್ಟಕ್ಕೇ ತೃಪ್ತಿಪಟ್ಟುಕೊಂಡಿದೆ.

ತರೀಕೆರೆ ತಾಲೂಕನ್ನು ಹೊರತುಪಡಿಸಿದರೆ ಉಳಿದೆಡೆ ಹೆಚ್ಚಿನ ಕೃಷಿ ಪ್ರದೇಶ ಮಳೆ ಆಧಾರಿತವಾಗಿದ್ದು ಮಳೆಯಿಂದ ತುಂಬಿಕೊಳ್ಳುವ ಕೆರೆಗಳು ನೀರಿನ ಮುಖ್ಯ ಈ ನೀರಿನಮೂಲಕ್ಕೆ ಆತಂಕ ಎದುರಾಗುತ್ತಿದೆ.

'ನೀಲಗಿರಿ ನಮ್ಮ ಬದುಕನ್ನು ಬಲಿತೆಗೆದುಕೊಳ್ಳುತ್ತಿದೆ ಸಾರ್' ಎನ್ನುತ್ತಾ ಅದರ ದುಷ್ಪರಿಣಾಮದ ವಿವರ ನೀಡಿದವರು ಮಳಲೂರಿನ ರೈತ ಜವರೇಗೌಡ. ಬೋಳು ಗುಡ್ಡಗಳಲ್ಲೆಲ್ಲಾ ಇತ್ತೀಚೆಗೆ ವ್ಯಾಪಕವಾಗಿ ನೀಲಗಿರಿ ಬೆಳೆಸಲಾಗುತ್ತಿದ್ದು ಅದಕ್ಕಾಗಿ ಅಡ್ಡವಾಗಿ ಕಂದಕತೋಡಲಾಗುತ್ತಿದೆ. ಹಿಂದೆ ಬೆಟ್ಟಕ್ಕೆ ಬಿದ್ದ ನೀರು ನೇರವಾಗಿ ಹರಿದು ಬುಡದಲ್ಲಿರುವ ಕೆರೆಯಲ್ಲಿ ಸಂಗ್ರಹಗೊಳ್ಳುತ್ತಿತ್ತು ಈಗ ಮಳೆನೀರು ಕಂದಕಗಳಲ್ಲಿಯೇ ಇಂಗುತ್ತಿದೆ.

ಚಿಕ್ಕಮಗಳೂರಿನ ಅಂಬ್ಳೆಹೋಬಳಿ ಮತ್ತು ಲಕ್ಯಹೋಬಳಿ ಪ್ರದೇಶದ ಕುರುಬರಹಳ್ಳಿ, ಮಾಗಡಿ, ಹಾದರಳ್ಳಿ, ಮುಗುಳವಳ್ಳಿ ಎಲ್ಲಕಡೆಗಳಲ್ಲೂ ಭತ್ತವೇ ಮುಖ್ಯ ಬೆಳೆ. ಇಲ್ಲೆಲ್ಲಾ ಹಿಂದೆ ಎರಡಿಂಚು ಮಳೆ ಬಂದರೆ ಬೆಟ್ಟದ ಬುಡಗಳ ಕೆರೆಗದ್ದೆಗಳಲ್ಲಿ ನೀರು ತುಂಬುತ್ತಿತ್ತಂತೆ. ಇದೀಗ 25 ಇಂಚು ಮಳೆ ಬಂದರೂ ನೀರು ಕೆಳಗೆ ತಲುಪದು. 'ನೀಲಗಿರಿ ಬೆಳೆಯಲಿ-ನಮ್ಮ ಅಭ್ಯಂತರವಿಲ್ಲ. ಆದರೆ ನಮ್ಮ ಭೂಮಿಯನ್ನು ಬರಡುಗೊಳಿಸುವುದು ಸಹಿಸೋದು ಹ್ಯಾಗೆ" ಜವರೇಗೌಡರ ಪ್ರಶ್ನೆ. ಅವರು ಜಿಲ್ಲಾ ರೈತಸಂಘದ ಕಾರ್ಯದರ್ಶಿಯೂ ಹೌದು.

ಈ ಜಿಲ್ಲೆಯಲ್ಲಿ ಎರಡರಿಂದ ಆರು ಎಕರೆ ಜಮೀನು ಹೊಂದಿರುವ ಸಣ್ಣ ಹಿಡುವಳಿದಾರರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಉಳುವವನೇ ನೆಲದೊಡೆಯನಾಗಿರುವುದರಿಂದ ಕಾರ್ಮಿಕರ ಸಮಸ್ಯೆ ಅಷ್ಟೊಂದು ತೀವ್ರವಾಗಿಲ್ಲ.

ಭತ್ತವೇ ಪ್ರಮುಖ ಬೆಳೆಯಾದರೂ ಜನಜೀವನ ಕಾಫಿ ಬೆಳೆಯ ಮೇಲೆ ಹೆಚ್ಚು ಅವಲಂಬಿಸಿದೆ. ನಾಟಿ ಕೆಲಸ ಮುಗಿಯುತ್ತಿದ್ದಂತೆ ಎಸ್ಟೇಟುಗಳಲ್ಲಿ '16ಪಟ್ಟಿ' ಕೆಲಸಕ್ಕೆ ಹೋಗಲು ರೈತರು ಸಜ್ಜಾಗುತ್ತಾರೆ. ಗೌರಿಹಬ್ಬದ ನಂತರ ತಂಡತಂಡವಾಗಿ ಅವರು ಚಿಕ್ಕಮಗಳೂರು, ಮೂಡಿಗೆರೆ, ಕೊಪ್ಪ, ತರೀಕೆರೆಗಳತ್ತ ವಲಸೆಹೋಗುತ್ತಾರೆ. 16ದಿನಗಳ ತಾತ್ಕಾಲಿಕ ಕೆಲಸದ ಅವಧಿಗೆ 120 ರೂಪಾಯಿ ಸಂಬಳ. ಕಾಫಿಕೊಯಿಲಿನವರೆಗೆ ಎಸ್ಟೇಟುಗಳಲ್ಲಿಯೇ ವಾಸ್ತವ್ಯ. "ಕಾಫಿ ತೋಟದ ದುಡಿಮೆಯಿಲ್ಲದೆ ಹೋಗಿದ್ದರೆ ನಾವು ಗದ್ದೆಯ ಮಣ್ಣನ್ನೇ ತಿನ್ನಬೇಕಾಗಿತ್ತು ಸಾರ್" ಎನ್ನುತ್ತಾರೆ ಈ ಕೃಷಿ ಕಾರ್ಮಿಕರು.

ಭತ್ತದ ಎಕರೆವಾರು ಉತ್ಪಾದನೆಯೂ ಇಲ್ಲಿ ಆಶಾದಾಯಕವಾಗಿಲ್ಲ. ಸಾಂಪ್ರದಾಯಿಕ ತಳಿಯಾದರೆ 10ರಿಂದ 15 ಕ್ವಿಂಟಲ್. ಸುಧಾರಿತ ತಳಿಯಾದರೆ 18 ರಿಂದ 20 ಕ್ವಿಂಟಲ್. ಭೂಮಿಯ ಬಾಡಿಗೆಯನ್ನು ಹೊರತುಪಡಿಸಿದರೆ ಒಂದು ಎಕರೆ ಭತ್ತದ ಕೃಷಿಗೆ ತಗಲುವ ವೆಚ್ಚ 1,000 ದಿಂದ 1,500ರೂ. ಈ ಪರಿಸ್ಥಿತಿಯಲ್ಲಿ ರೈತ ತಲೆಎತ್ತುವುದು ಹೇಗೆ?

ಚಿಕ್ಕಮಗಳೂರು ಜಿಲ್ಲೆಯದು ಇನ್ನೂ ಒಂದು ಸಮಸ್ಯೆಯಿದೆ. ಇಲ್ಲಿನ ಭತ್ತ ಕೆಳದರ್ಜೆಯದು ಎಂಬ ಸಾಮಾನ್ಯ ಅಭಿಪ್ರಾಯವಿದ್ದು ಸರಕಾರವೂ ಇದನ್ನು ಕೊಳ್ಳಲು ನಿರಾಕರಿಸುತ್ತಿದೆ. ನರಸಿಂಹರಾಜಪುರ ಅತ್ಯಧಿಕ ಭತ್ತ ಉತ್ಪಾದನೆಯ ಪ್ರದೇಶ. ಆದರೆ ಇಲ್ಲಿನ ಭತ್ತಕ್ಕೆ ಗಿರಾಕಿಯಿಲ್ಲ. ಕಪ್ಪುಭತ್ತವೆಂಬ ತಿರಸ್ಕಾರ. ಕಳೆದ ವರ್ಷ ಕ್ವಿಂಟಾಲಿಗೆ 120 ರೂಪಾಯಿಯಂತೆ ಭತ್ತ ಮಾರಾಟ ಮಾಡಬೇಕಾಯಿತಂತೆ. ಇಲ್ಲಿನ ಹವಾಗಿ, ಕಪ್ಪು ಭತ್ತವನ್ನು ... ಗುತ್ತದೆ.

ಇತರ ಮಲೆನಾಡು ಪ್ರದೇಶಗಳಿಗಿಂತ ಭಿನ್ನವಾಗಿ ಇಲ್ಲಿನ ಗದ್ದೆಗಳು ಸಮತಟ್ಟಾಗಿರದೆ ಉಬ್ಬುತಗ್ಗುಗಳಿಂದ ಕೂಡಿ ಇಳಿಜಾರಾಗಿರುವುದು ಒಂದು ವಿಶೇಷ. ನೀರು ಸಮನಾಗಿ ಹಂಚಿಹೋಗದ ಕಾರಣ ನೀರಿನ ಕೊರತೆಯ ಭಾಗದ ಭತ್ತ ಕೆಂಪು ಮಿಶ್ರಿತ ಕಪ್ಪುಬಣ್ಣ ಹೊಂದಿರುತ್ತದೆ ... ಅವಶ್ಯಕತೆ ಪೂರೈಸುವ ...

ಪ್ರದೇಶವಾಗಿದೆ. ಈ ಬಣ್ಣವೇ ಶಾಪವಾಗಿ ಇಲ್ಲಿನ ರೈತರನ್ನು ಕಾಡುತ್ತಿದೆ. ಜಿಲ್ಲೆಯ ಭತ್ತದ ಉತ್ಪಾದನೆ 1,78,000ಟನ್. ಅವಶ್ಯಕತೆ 1,28,000 ಟನ್. ಮಿಗತೆಯಾಗಿ ಉಳಿದ 50,000 ಟನ್‌ಗಳು ಕೇಳದ ಬೆಲೆಗೆ ಕೊಡಬೇಕಾದ ಸ್ಥಿತಿಯಲ್ಲಿದ್ದಾರೆ ರೈತರು.

ಇಲ್ಲಿಯೂ ಭತ್ತದ ಮೇಲಿನ ಅಂಧಶ್ರದ್ಧೆ ನಿಧಾನವಾಗಿ ಕರಗುತ್ತಿದೆ. ಇತ್ತೀಚೆಗೆ ಸೂರ್ಯಕಾಂತಿ ಬೆಳೆ ಇಲ್ಲಿ ಹೊಸಕಾಂತಿಯನ್ನೇ ಮೂಡಿಸಿದೆ. ಆಲೂಗಡ್ಡೆ, ಮತ್ತು ತರಕಾರಿ ಕೃಷಿ ರೈತ ಸಮುದಾಯದಲ್ಲಿ ಹೆಚ್ಚು ಜನಪ್ರಿಯವಾಗುತ್ತಿದೆ.

ಶಿವಮೊಗ್ಗ

'ಶಿವಮೊಗ್ಗ ರಾಜ್ಯದ ಭತ್ತದ ಕಣಜ' ಎಂದೇ ಪ್ರಸಿದ್ಧಿ. ಆದರೆ ಈ ಪ್ರಸಿದ್ಧಿಯನ್ನು ಕಳೆದುಕೊಳ್ಳುವ ಸಂಕ್ರಮಣ ಸ್ಥಿತಿಯಲ್ಲಿದೆ ಇಲ್ಲಿನ ಭತ್ತದಕೃಷಿ. ಭತ್ತದ ತವರೂರಾದ ಶಿವಮೊಗ್ಗ ತಾಲೂಕಿನಲ್ಲಿಯೇ ಭತ್ತದ ನೆಲದಲ್ಲಿ ಕಬ್ಬಿನ ಬೆಳೆ ಕಂಗೊಳಿಸುತ್ತಿರುವುದು. ಇತ್ತೀಚಿನ ಆಶ್ಚರ್ಯಕರ ಬೆಳವಣಿಗೆ. ಇಲ್ಲಿನ ಸುಮಾರು ಶೇಕಡ 40 ರಷ್ಟು ರೈತರು ಭತ್ತ ಕೈಬಿಟ್ಟು ಕಬ್ಬು ಬೆಳೆಯುತ್ತಿದ್ದಾರೆ ಎನ್ನುತ್ತಾರೆ ಇಲ್ಲಿನ ರೈತಮುಖಂಡರು. ರೈತಚಳವಳಿಯಿಂದ ಉಂಟಾದ ಜಾಗೃತಿಯೇ ರೈತರು ಭತ್ತದ ಸೆಳೆತದಿಂದ ಹೊರಬರಲು ಕಾರಣವಾಗಿರಬಹುದು. ತಮ್ಮ ಆವಶ್ಯಕತೆಗೆ ಬೇಕಾದಷ್ಟು ಮಾತ್ರಭತ್ತ ಬೆಳೆಯಲು ಇಲ್ಲಿನ ಕೆಲವು ಜಾಣರೈತರು ತೀರ್ಮಾನಿಸುತ್ತಿರುವುದು ಕಂಡು ಬರುತ್ತಿದೆ.

ಇದೀ ಶಿವಮೊಗ್ಗ ... ಆಶ್ಚರ್ಯಕರ ಬೆಳವಣಿಗೆ ... ಅವಶ್ಯಕತೆಗೆ ಹೋಲಿಸಿದರೆ ಪ್ರಯೋಗ ವಾಗಿದೆ.

ರಾಯಚೂರು ಮತ್ತು ಮಂಡ್ಯಜಿಲ್ಲೆಗಳನ್ನು ಹೊರತುಪಡಿಸಿದರೆ ತುಂಗಾ ಅಣೆಕಟ್ಟು ಮತ್ತು ಭದ್ರಾ ಜಲಾಶಯಗಳಿಂದಾಗಿ ಅತ್ಯಧಿಕ ನೀರಾವರಿ ಸೌಲಭ್ಯ ಪಡೆದ ಜಿಲ್ಲೆ ಇದು. ಆದರೆ ಈ ಸೌಲಭ್ಯ ಶಿವಮೊಗ್ಗ, ಭದ್ರಾವತಿ, ಚನ್ನಗಿರಿ ಮತ್ತು ಹೊನ್ನಾಳಿ ತಾಲೂಕುಗಳ ಅರೆವಾಸಿ

ಮುಂಗಾರು
2 ಪತ್ರಿಕೆಯ
ನೇ ಹುಟ್ಟುಹಬ್ಬಕ್ಕೆ ನಮ್ಮ
ಹಾರ್ದಿಕ ಶುಭಕಾಮನೆಗಳು
ಜಯಂತ ಟೆಕ್ಸ್‌ಟೈಲ್ಸ್
ಹಂಪನಕಟ್ಟೆ ಮಂಗಳೂರು-1
ಮದುವೆ ಸೀರೆಗಳ ವಿಶೇಷ ಪರಿಣಿತರು
ಹಾಗೂ ಇನ್ನಿತರ ಎಲ್ಲಾ ತರದ ಜವುಳಿ ವ್ಯಾಪಾರಸ್ಥರು
ಜೈಸನ್ಸ್
ಜಯಂತ ಟೆಕ್ಸ್‌ಟೈಲ್ಸ್‌ನ ಮಹಡಿ,ಹಂಪನಕಟ್ಟೆ,ಮಂಗಳೂರು
ಫರ್ನಿಶಿಂಗ್ ಹಾಗೂ ಬೆಡ್‌ಸ್ಪ್ರೆಡ್,ಬಾತ್‌ಟವೆಲು,ಚೂರಿದಾರಸೆಟ್ಟುಗಳು,'ವಿಜಬ್ರಾಂಡ್'
ಗೇರು ಬೀಜಗಳ ವ್ಯಾಪಾರಸ್ಥರು
ವಿಜಸನ್ಸ್
ಟವರ್ ಕ್ಲಾಕ್ ಎದುರು, ಮೆಹಮಾನ್ ಹೋಟೆಲ್ ಬಳಿ, ಮಂಗಳೂರು
ಬಾಂಬೆ ಡಾಯಿಂಗ್ ಮಿಲ್ಲಿನ ಅಧಿಕೃತ ಶೋ ರೂಂ
ರೇಮಂಡ್ಸ್ ರಿಟೇಲ್ ಶೋಪ್
ಟವರ್ ಕ್ಲಾಕ್ ಎದುರು,ಮೆಹಮಾನ್ ಹೋಟೆಲ್ ಬಳಿ,ಮಂಗಳೂರು-1
ಪ್ರತಿಷ್ಠೆಯ ರೇಮಂಡ್ ಬಟ್ಟೆಗಳ ವಿಕ್ರಯ ಶೋ ರೂಮ್

ಪ್ರದೇಶಗಳಿಗೆ ಮಾತ್ರ ಸೀಮಿತಗೊಂಡಿದೆ. ಉಳಿದ ಮಲೆನಾಡ ತಾಲೂಕುಗಳ ಭತ್ತದ ಕೃಷಿ ಮಳೆಯೊಡನೆ ನೇರ ಜೂಜಾಟ.

ನೀರಾವರಿ ಸೌಲಭ್ಯವಿರುವ ಪ್ರದೇಶದಲ್ಲಿ ವರ್ಷಕ್ಕೆ ಎರಡೇ ಬೆಳೆ. ಮಳೆ ನೀರಿಗೆ ಜುಲೈ ತಿಂಗಳಲ್ಲಿ ಕೆಲಸ ಪ್ರಾರಂಭಗೊಳ್ಳುವ ಮೊದಲ ಬೆಳೆ ನವೆಂಬರ್‌ನಲ್ಲಿ ಫಸಲಿಗೆ ಬಂದರೆ, ಫೆಬ್ರವರಿಯಲ್ಲಿ ಕೊಡಗುವಂತಹ ಎರಡನೇ ಬೆಳೆ ಜುಲೈ ತಿಂಗಳಲ್ಲಿ ಸಿದ್ಧ. ಎರಡನೇ ಬೆಳೆ ಸಂಪೂರ್ಣವಾಗಿ ನೀರಾವರಿ ಆಶ್ರಿತವಾದುದು. ಈ ಪ್ರದೇಶದ ರೈತರು, ಉಳಿದವರಿಗೆ ಹೋಲಿಸಿದರೆ ಸಾಕಷ್ಟು ಸಂತೃಪ್ತರೇ. ಎರಡು ಬೆಳೆ ಬೆಳೆಯುವ ಇವರಿಗೆ ವರ್ಷವಿಡೀ ಕೈತುಂಬಾ ಕೆಲಸ, ಫಸಲಿನ ಬಗ್ಗೆಯೂ ಅನಿಶ್ಚಿತತೆಯಿಲ್ಲ.

ಮಲೆನಾಡು ಪ್ರದೇಶಗಳಾದ ಶಿಕಾರಿಪುರ, ಹೊಸನಗರ, ಸಾಗರ, ಸೊರಬ, ತೀರ್ಥಹಳ್ಳಿ ಭಾಗದ ರೈತರು ಕೃಷಿಗಾಗಿ ಮಳೆಯನ್ನೇ ಸಂಪೂರ್ಣವಾಗಿ ಅವಲಂಬಿಸಿರುವವರು. ಇಲ್ಲಿ 'ಕೂರ್ಗೆ ಬಿತ್ತನೆ' ಎಂಬ ವಿಶಿಷ್ಟ ಕೃಷಿ ವಿಧಾನ ಬಳಕೆಯಲ್ಲಿದೆ. ಮೇ ತಿಂಗಳ ಮೊದಲ ವಾರದಲ್ಲಿ ಕಾರ್ತಿಕ ಮಳೆ ಬಂದರೆ ಮಾತ್ರ ಇದು ಸಾಧ್ಯ. ಇತ್ತೀಚೆಗೆ ನಿರಂತರವಾಗಿ ಈ ಮಳೆ ಕೈಕೊಡುತ್ತಿರುವುದರಿಂದ ಅತ್ತ ಕೂರ್ಗೆ ಬಿತ್ತನೆಯನ್ನೂ ಮಾಡಲಾಗದೆ ಇತ್ತ ನಾಟಿಯನ್ನೂ ಮಾಡಲಾಗದ ರೈತರದು ತ್ರಿಶಂಕು ಸ್ಥಿತಿ.

ಮಳೆಯನ್ನು ನಂಬಿ ವರ್ಷಕ್ಕೊಂದೇ ಬೆಳೆಬೆಳೆಯುವ ಮಲೆನಾಡಿನ ಭತ್ತದ ಇಳುವರಿಯೂ ತೃಪ್ತಿಕರವಾಗಿಲ್ಲ. ಎಕರೆಗೆ ಆರರಿಂದ ಏಳು ಕ್ವಿಂಟಾಲ್ ಇಳುವರಿ ಬಂದರೆ ಹೆಚ್ಚು (ನೀರಾವರಿ ಪ್ರದೇಶದಲ್ಲಿ ಇದರ ಪ್ರಮಾಣ 20ರಿಂದ 25 ಕ್ವಿಂಟಾಲ್) ಆದರೆ ಶಿವಮೊಗ್ಗ ಜಿಲ್ಲೆಯ ಒಟ್ಟು ಉತ್ಪಾದನೆಯಲ್ಲಿ ಇವರದ್ದೇ ಸಿಂಹಪಾಲು.

ಮಲೆನಾಡು ಮತ್ತು ಮಲೆನಾಡೇತರ ಪ್ರದೇಶದ ರೈತವರ್ಗದಲ್ಲಿ ಕೆಲವೊಂದು ಎದ್ದು ತೋರುವ ಅಂತರಗಳನ್ನು ಕಾಣಬಹುದಾಗಿದೆ. ನೀರಾವರಿ ಸೌಲಭ್ಯದಿಂದಾಗಿ ಕೊಂಚ ಅನುಕೂಲಕರ ಸ್ಥಿತಿಯಲ್ಲಿರುವ ಮಲೆನಾಡೇತರ ರೈತರಲ್ಲಿ ದುಡಿಮೆ, ಶಿಸ್ತು, ಸ್ವಾವಲಂಬನೆಯ ಬಗ್ಗೆ ಅರಿವಿಲ್ಲ. 'ಸಾಲ ಮಾಡಿ ಬೆಳೆ ಬೆಳೆಯುವುದು ಮತ್ತೆ ಅದನ್ನು ತೀರಿಸುವುದು ಇವರಲ್ಲಿಯೇ ನಮ್ಮ ಜೀವನ ಮುಗಿಯುತ್ತದೆ' ಎನ್ನುತ್ತಾರೆ ಅಲ್ಲಿನ ರೈತರು.

ಆದರೆ ಮಲೆನಾಡ ರೈತರದು ಶಿಸ್ತು ಬದ್ಧ ಜೀವನ. ಹಸಿದ, ಕೊಳೆಯಾದ ಬಟ್ಟೆಯನ್ನು ಅವರೆಂದೂ ಧರಿಸರು. ಎಲ್ಲವೂ ಒಪ್ಪ ಓರಣ. ಮನೆ ಎದುರು ಸಣ್ಣ ತೋಟ ಸಾಮಾನ್ಯನೋಟ. ಅತಿಥಿ ಸತ್ಕಾರದಲ್ಲೂ ಅವರದು ಎತ್ತಿದ ಕೈ.

ಘಟ್ಟ ಇಳಿದು ಬಂದರೆ

"ಒಂದೊಂದು ಪ್ರದೇಶದಲ್ಲಿ ಒಂದೊಂದು ಉದ್ಯೋಗ ಸ್ವಾಮಿ. ಸಿರ್ಸಿ, ಸಿದ್ದಾಪುರದಲ್ಲಿ ಪ್ಲಾಂಟೇಷನ್, ಘಟ್ಟದಿಂದ ಕೆಳಗಿಳಿದು ಹೋದರೆ ಭತ್ತ, ಕಾರವಾರದಲ್ಲಿ ಫಿಶಿಂಗ್, ಭಟ್ಕಳದಲ್ಲಿ ಸ್ಮಗ್ಲಿಂಗ್..." ಶಿವಮೊಗ್ಗದಿಂದ ಸಿರ್ಸಿ ಕಡೆ ಪ್ರಯಾಣಿಸುತ್ತಿದ್ದಾಗ ಸಹಪ್ರಯಾಣಿಕರೊಬ್ಬರು ನನ್ನ ಕುತೂಹಲದ ಪ್ರಶ್ನೆಗೆ ತಮ್ಮದೇ ಶೈಲಿಯಲ್ಲಿ ಉತ್ತರ ನೀಡುತ್ತಿದ್ದರು. ಉತ್ತರಕನ್ನಡದ ವೈವಿಧ್ಯಮಯ ಪ್ರಕೃತಿ ಆದರೊಂದಿಗೆ ಬೆಸೆದ ವಿಭಿನ್ನ ಶೈಲಿಯ ಜನಜೀವನ ಎಲ್ಲವನ್ನು ಕಂಡಾಗ ಅವರ ಮಾತು ಅರ್ಥಪೂರ್ಣವೆನಿಸುತ್ತದೆ.

ಕಡಲತೀರದಲ್ಲಿ ನಿಂತು ನೋಡಿದರೆ ದಕ್ಷಿಣಕನ್ನಡದ ತಂಗಿಯಂತೆ ಕಾಣುವ ಘಟ್ಟದತ್ತ ಕಂಡಾಗ ಶಿವಮೊಗ್ಗದ ಅಣ್ಣನಂತೆ ತೋರುವ ಉತ್ತರಕನ್ನಡ ಮೋಹಕ ಕಡಲತೀರ ಮತ್ತು ರುದ್ರರಮಣೀಯ ಪರ್ವತಶ್ರೇಣಿಗಳೆರಡನ್ನು ಪಡೆದ ನೆಲ. ಸಹ್ಯಾದ್ರಿ ಪರ್ವತಶ್ರೇಣಿಯ ಇಕ್ಕೆಲಗಳಲ್ಲಿ ಹಬ್ಬಿಕೊಂಡ ಈ ಜಿಲ್ಲೆಯ ಮಧ್ಯಭಾಗದ ಸಿದ್ದಾಪುರ, ಸಿರ್ಸಿ, ಯಲ್ಲಾಪುರಗಳಲ್ಲಿ ಅಡಿಕೆ ಮರಗಳು ತೊನೆಯುತ್ತಿದ್ದರೆ ಸಹ್ಯಾದ್ರಿಯ ಪೂರ್ವ ಮಗ್ಗುಲಿನ ಮುಂಡಗೋಡು, ಹಳಿಯಾಳ ಮತ್ತು ಕರಾವಳಿಯ ಭಟ್ಕಳ, ಹೊನ್ನಾವರ, ಅಂಕೋಲಾ, ಕಾರವಾರಗಳಲ್ಲಿ ಭತ್ತದ ಗದ್ದೆಗಳು ಕಂಗೊಳಿಸುತ್ತಿವೆ. ಲಾಭದಾಯಕ ಅಡಿಕೆ ತೋಟಗಳು ಜಾಣ ಹವ್ಯಕ ಬ್ರಾಹ್ಮಣರ ಕೈಯಲ್ಲಿದ್ದರೆ ನಷ್ಟದ ಭತ್ತದ ಗದ್ದೆಗಳು ಕೆಳವರ್ಗದವರ ಕೈಯಲ್ಲಿರುವುದು ಒಂದು ವಿಶೇಷ. ಚಿಕ್ಕಮಗಳೂರು ಮತ್ತು ಕೊಡಗಿನ ನಂತರ ತಲಾವಾರು ಆದಾಯದಲ್ಲಿ ಮೂರನೇ ಸ್ಥಾನ ಈ ಜಿಲ್ಲೆಗಿದೆ. ರಾಜ್ಯದ ಒಟ್ಟು ಅರಣ್ಯ ಆದಾಯದಲ್ಲಿ ಈ ಜಿಲ್ಲೆಯ ಕೊಡುಗೆ ಶೇ.40ರಷ್ಟು.

'ಉತ್ತರಕನ್ನಡದ ಕಣಜ' ಎಂದೇ ಪ್ರಸಿದ್ಧಿ ಪಡೆದ ಮಲೆನಾಡ ಸೆರಗಿನ ಮುಂಡಗೋಡು ಮತ್ತು ಹಳಿಯಾಳ ತಾಲೂಕುಗಳು ಇಲ್ಲಿನ ಅತೀಹೆಚ್ಚು ಭತ್ತ ಬೆಳೆಯುವ ಪ್ರದೇಶ. ಇವುಗಳನ್ನು ಹೊರತುಪಡಿಸಿದರೆ ಭಟ್ಕಳ, ಹೊನ್ನಾವರ ಅಂಕೋಲಾ, ಕಾರವಾರ ತಾಲೂಕುಗಳಲ್ಲಿಯೂ ಸಮೃದ್ಧ ಭತ್ತ ಬೆಳೆಯಲಾಗುತ್ತಿದೆ. ಕರಾವಳಿಯಿಂದ ಬೈಲೂರು ವರೆಗೆ ಸಮುದ್ರ ಮತ್ತು ಬೆಟ್ಟಗಳ ಮಧ್ಯೆ ಹಬ್ಬಿಕೊಂಡ ಬಯಲು ಪ್ರದೇಶ ಭತ್ತದ ಬೆಳೆಗೆ ಅತ್ಯಂತ ಫಲವತ್ತಾದುದೆಂದು ಅನ್ನಬಹುದು.

ಸಾಮಾನ್ಯವಾಗಿ ಮೂರು ವಿಧದ ಭತ್ತದ ಕೃಷಿಯನ್ನು ಇಲ್ಲಿನ ರೈತರು ಅನುಸರಿಸುತ್ತಾರೆ. ಸಿರ್ಸಿಯ ಪೂರ್ವಭಾಗ, ಸಿದ್ದಾಪುರ, ಹಳಿಯಾಳ ಮತ್ತು ಮುಂಡಗೋಡಿನಲ್ಲಿ ಮಲೆನಾಡ ಮಾದರಿಯ 'ಕೂರ್ಗೆ ಬಿತ್ತನೆ' ನಡೆಸಿದರೆ ಘಟ್ಟದ ಕೆಳಗಿನ ಕರಾವಳಿ ತಾಲೂಕುಗಳಲ್ಲಿ ಮೇ ಮಧ್ಯಭಾಗದಲ್ಲಿ ನೇರ ಬಿತ್ತನೆ. ಉಳಿದ ಪ್ರದೇಶಗಳಲ್ಲಿ ಜೂನ್-ಜುಲೈ ತಿಂಗಳಲ್ಲಿ ನಾಟಿ ಪದ್ಧತಿ ಚಾಲ್ತಿಯಲ್ಲಿದೆ.

ಜಿಲ್ಲೆಯಲ್ಲಿ ನಾಲ್ಕು ನದಿಗಳು ಹರಿಯುತ್ತಿದ್ದು ಉತ್ತರದಲ್ಲಿ ಕಾಳಿ, ದಕ್ಷಿಣದಲ್ಲಿ ಬೇಡ್ತಿ ಅಥವಾ ಗಂಗಾವಳಿ ಮತ್ತು ಅಘನಾಶಿನಿ ಹಾಗೂ ಜೋಗ ಜಲಪಾತದ ಖ್ಯಾತಿಯ ಶರಾವತಿ. ಆದರೆ ಇಲ್ಲಿನ ಒಟ್ಟು ಕೃಷಿ ಪ್ರದೇಶದ ಸುಮಾರು ಶೇಕಡ 19ರಷ್ಟು ಭಾಗ ಮಾತ್ರ ನೀರಾವರಿ ಸೌಲಭ್ಯ ಉಂಟು.

ಮುಂಡಗೋಡು ತಾಲೂಕಿನ ಮಳಗಿಯಲ್ಲಿ ಧರ್ಮಾನದಿಗೆ ಅಡ್ಡಲಾಗಿ ಕಟ್ಟಲಾದ ಆಣೆಕಟ್ಟು ಇಲ್ಲಿನ ಪ್ರಮುಖ ನೀರಾವರಿ ಯೋಜನೆ. ಈ ಆಣೆಕಟ್ಟು ಉತ್ತರ ಕನ್ನಡದ ಭೌಗೋಳಿಕ ಪ್ರದೇಶದಲ್ಲಿದ್ದರೂ ಹೆಚ್ಚಿನ ನೀರಾವರಿ ಸೌಲಭ್ಯ ಪಡೆಯುತ್ತಿರುವುದು ಧಾರವಾಡದ ಹಾನಗಲ್ ತಾಲೂಕಿನ ಜಮೀನುಗಳು.

ದ. ಕ. ಒಡಲೊಳಗೆ ವೈವಿಧ್ಯ–ವೈಚಿತ್ರ್ಯ

ಘಟ್ಟದಿಂದ ಕೆಳಗಿಳಿದು ಬಂದವರಿಗೆ ಅಪರಿಚಿತ ನೆಲದ ಅನುಭವ ನೀಡುವ ದಕ್ಷಿಣ ಕನ್ನಡ ಮತ್ತು ಕಡಲುಗಳ ನಡುವೆ ಅವಿತುಕೊಂಡು ಒಡಲೊಳಗೆ ವೈವಿಧ್ಯಮಯ ಪ್ರಕೃತಿ, ಜನಜೀವನ, ಭಾಷೆ, ಸಂಸ್ಕೃತಿಗಳನ್ನು ಬಚ್ಚಿಟ್ಟುಕೊಂಡ ನಿಗೂಢ ಜಿಲ್ಲೆ. ಪರಶುರಾಮನ ಕೊಡಲಿಗಂಜಿ ಕಡಲು ಓಡಿಹೋದ ನೆಲವಿದು ಎಂಬ ಪುರಾಣದ ಕತೆಗೆ ಕತೆಗೆ ಭೂಶಾಸ್ತ್ರಜ್ಞರು ಇದು ಸಮುದ್ರದ ಹಿಂಜರಿತದಿಂದ ಉಂಟಾದ ಭೂಭಾಗ ಎಂಬ ವೈಜ್ಞಾನಿಕ ಹಿನ್ನೆಲೆ ನೀಡುತ್ತಾರೆ. ಈ ಕಾರಣದಿಂದಾಗಿಯೇ ಕಡಲು ತನ್ನ ನೆಲವನ್ನು ಮತ್ತೆ ಪಡೆಯಲು ಕರಾವಳಿಯುದ್ದಕ್ಕೂ ನಡೆಸುತ್ತಿರುವ ಹೋರಾಟವನ್ನು ಜೀವಂತವಾಗಿಟ್ಟಿದೆ.

ಒಂದು ದೃಷ್ಟಿಯಿಂದ ನೋಡಿದರೆ ದಕ್ಷಿಣ ಕನ್ನಡ ಎಂದೂ ಸಂಪೂರ್ಣವಾಗಿ ಕೃಷಿಯನ್ನೇ ಪೂರ್ಣವಾಗಿ ಅವಲಂಬಿಸಿದ್ದಿಲ್ಲ. ಇಲ್ಲಿನ ಒಟ್ಟು 21 ಲಕ್ಷ ಎಕರೆ ಭೂಮಿಯಲ್ಲಿ ಕೃಷಿ ಪ್ರದೇಶ ಕೇವಲ ಏಳು ಲಕ್ಷ ಎಕರೆ ಮಾದರೆ, ಭತ್ತ ಬೆಳೆಯುವ ಪ್ರದೇಶ ಮೂರು ಲಕ್ಷ ಎಕರೆ. ಕೃಷಿ ನಿಧಾನವಾಗಿ ಈ ಜಿಲ್ಲೆಯಲ್ಲಿ ಪ್ರಾಮುಖ್ಯತೆ ಕಳೆದುಕೊಳ್ಳುತ್ತಿದ್ದು ಉಪಕಸುಬಿನ ಸ್ಥಾನದತ್ತ ಸರಿಯುತ್ತಿದೆ. ಕೈಗಾರಿಕೆ ಮತ್ತು ವಾಣಿಜ್ಯ ಕೃಷಿಯ ಸ್ಥಾನವನ್ನು ಆಕ್ರಮಿಸುತ್ತಿದ್ದಂತೆ ಮಣ್ಣಿನ ಮಕ್ಕಳ ಮುಗ್ಧತೆ ಮತ್ತು ನಿರ್ಮಲ ಮನಸ್ಸುಗಳು ನಿಧಾನವಾಗಿ ಮಾಯವಾಗುತ್ತಿರುವುದು ಜಿಲ್ಲೆಯ ಇತ್ತೀಚಿನ ವಿಷಾದಕರ ಬೆಳವಣಿಗೆ.

ಈಗಲೂ ಮೇಲ್ನೋಟಕ್ಕೆ ಕೃಷಿಯೇ ಇಲ್ಲಿನ ಪ್ರಧಾನ ವೃತ್ತಿ ಎಂದು ಕಂಡರೂ ಜನರ ಕೈಯಲ್ಲಿ ಕುಣಿಯುವ ಹಣ ಈ ಮಣ್ಣಿನದಲ್ಲ ಎಂಬುದು ಅಷ್ಟೇ ಸತ್ಯ. ಮುಂಬಯಿ ಬೆಂಗಳೂರು ಇಲ್ಲವೇ ಕೊಲ್ಲಿ ರಾಷ್ಟ್ರಗಳಲ್ಲಿ ಗಳಿಸುವವರಿಲ್ಲದ ಒಂದೇ ಒಂದು ಕುಟುಂಬವೂ ಈ ಜಿಲ್ಲೆಯಲ್ಲಿಲ್ಲ ಎಂದರೂ ಅತಿಶಯೋಕ್ತಿಯಲ್ಲ. ಜನಜೀವನದಲ್ಲಿ ಹೊರಗಿನಿಂದ ಹರಿದು ಬರುತ್ತಿರುವ ಹಣದ್ದೇ ಪ್ರಧಾನ ಪಾತ್ರ. ಹೊಟೇಲಿನ ಮೇಜು ಒರೆಸುವಷ್ಟು ಬುದ್ಧಿ ಬೆಳೆದಾಯಿತು ಎಂಬ ಅರಿವಾದೊಡನೆ ಮಕ್ಕಳು "ಅಪ್ಪಾ ನಾನು ಬೊಂಬಾಯಿಗೆ ಹೋಗುತ್ತೇನೆ" ಎಂಬ ರಾಗ ಶುರು ಮಾಡುತ್ತಾರೆ. ಹೊರಗಿನ ಆಕರ್ಷಣೆ ಅಷ್ಟು ಪ್ರಬಲ.

ಬೇರು ಕಿತ್ತ ಭತ್ತ

ಹಂಗಸರೆಲ್ಲ ಬೀಡಿ ಉದ್ಯಮಕ್ಕೆ ತಮ್ಮನ್ನೇ ಮಾರಿಕೊಂಡರೆ, ಗಂಡಸರು ಮುಂಬಯಿ, ದುಬಾಯಿಗಳ ಹಾದಿಯಲ್ಲಿದ್ದಾರೆ. ಗದ್ದೆಯ ಕೆಸರಲ್ಲಿ ದುಡಿಯಲು ಜನರಿಲ್ಲ. ದುಡಿದರೂ ಮಳೆಗಾಲದಲ್ಲಿ ಒಪ್ಪೊತ್ತು ತಪ್ಪುವುದಿಲ್ಲ ಎಂದು ಗೊತ್ತು. ಈ ಕಾರಣದಿಂದಾಗಿಯೇ ಮುಖ್ಯವಾಗಿ ಭತ್ತ ಇಲ್ಲಿಂದ ಬೇರು ಕೀಳಲಾರಂಭಿಸಿದ್ದು. ಕರಾವಳಿಯ ಭತ್ತದಗದ್ದೆಗಳು ತೆಂಗಿನ ತೋಟಗಳಾಗಿ ಪರಿವರ್ತಿತವಾಗುತ್ತಿವೆ. ಐದಾರು ವರ್ಷ ಕಷ್ಟಪಟ್ಟರಾದರೆ ಆಮೇಲೆ ತೆಂಗು ಎಂದೂ ಭತ್ತದಂತೆ ಮೋಸ ಮಾಡುವುದಿಲ್ಲ. ಇತ್ತೀಚೆಗೆ ತೆಂಗಿನಕಾಯಿಯ ದುಬಾರಿ ಬೆಲೆಯೂ ಈ ಪರಿವರ್ತನೆಗೆ ಸ್ವಲ್ಪ ತಡೆಯೊಡ್ಡಿದೆ.

ಕರಾವಳಿಯಲ್ಲಿ ಭತ್ತದ ಸ್ಥಾನವನ್ನು ತೆಂಗು ಆಕ್ರಮಿಸಿಕೊಳ್ಳುತ್ತಿದ್ದರೆ ಜಿಲ್ಲೆಯ ಮಲೆನಾಡ ಭಾಗವಾದ ಸುಳ್ಯ, ಪುತ್ತೂರು, ಬೆಳ್ತಂಗಡಿ, ಬಂಟ್ವಾಳಗಳಲ್ಲಿ ಅಡಿಕೆ, ರಬ್ಬರ್, ಕೊಕ್ಕೋಗಳು ಜನಪ್ರಿಯವಾಗುತ್ತಿವೆ. ಮಳೆ ಈ ಜಿಲ್ಲೆಯ ವೈಶಿಷ್ಟ್ಯ. ರಾಜ್ಯದ ಯಾವುದೇ ಜಿಲ್ಲೆಗಳಿಗಿಂತ ಹೆಚ್ಚಿನ ಮಳೆ ಪಡೆಯುವ ದಕ್ಷಿಣ ಕನ್ನಡದ ವಾರ್ಷಿಕ ಮಳೆ 3,900 ಮಿ. ಮಿ. ಆದರೆ ಈ ಮಳೆ ಜೂನ್‌ನಿಂದ ಸೆಪ್ಟೆಂಬರ್ ವರೆಗಿನ ನಾಲ್ಕೇ ತಿಂಗಳಿಗೆ ಸೀಮಿತ.

ಬಿದ್ದ ಮಳೆಯೂ ಸೂಕ್ತ ನೀರಾವರಿ ಯೋಜನೆಗಳ ಕೊರತೆಯಿಂದಾಗಿ ವ್ಯರ್ಥವಾಗಿ ಸಮುದ್ರ ಸೇರುತ್ತದೆ. ಈ ಮಳೆಯನ್ನು ಸದುಪಯೋಗ ಪಡಿಸಿಕೊಳ್ಳಲು ಸಾಧ್ಯವಾದ ದಿನ ಜಿಲ್ಲೆಯ ಚರಿತ್ರೆಯನ್ನೇ ಹೊಸದಾಗಿ ಬರೆಯಬೇಕಾಗಬಹುದು.

ಕೊಡಗನ್ನು ಹೊರತುಪಡಿಸಿ ಮಲೆನಾಡಿನ ಬಾಕಿ ಎಲ್ಲ ಜಿಲ್ಲೆಗಳು ಭತ್ತದ ಉತ್ಪಾದನೆಯಲ್ಲಿ ಸ್ವಾವಲಂಬಿಯಾಗಿದ್ದರೆ, ದಕ್ಷಿಣ ಕನ್ನಡ ಮಾತ್ರ ಇದಕ್ಕೆ ಅಪವಾದ. ಕೆಲವು ವರ್ಷಗಳ ಹಿಂದೆ ಕುಂದಾಪುರ ತಾಲೂಕು ಸ್ವಾವಲಂಬನೆಯ ಅಂಚಿನಲ್ಲಿದ್ದರೂ ಅದು ಕೂಡಾ ಇತ್ತೀಚೆಗೆ ಪರಾವಲಂಬಿಯಾಗಿದೆ. ಕೃಷಿ ಇಲಾಖೆಯ ಅಂಕಿ ಅಂಶದ ಪ್ರಕಾರ ಜಿಲ್ಲೆಯ ಅಕ್ಕಿ ಅವಶ್ಯಕತೆ 3,07,147 ಟನ್. ಆದರೆ ಬಳಕೆಗಾಗಿ ಸಿಗುವ ಅಕ್ಕಿಯ ಪ್ರಮಾಣ 2,73,204 ಟನ್. ಕೊರತೆಯಾದ 33,943 ಟನ್ ಅಕ್ಕಿ ಹಾಸನ, ಚಿಕ್ಕಮಗಳೂರು, ಶಿವಮೊಗ್ಗ, ಮೈಸೂರು, ತುಮಕೂರು ಜಿಲ್ಲೆಗಳಿಂದ ಪೂರೈಕೆಯಾಗುತ್ತಿದೆ.

ಎಕ್ರೆವಾರು ಇಳುವರಿ ದಕ್ಷಿಣ ಕನ್ನಡದಲ್ಲಿ ಆಶಾದಾಯಕವಲ್ಲ. ಉತ್ತಮ ತಳಿಯ ಭತ್ತ ಎಕರೆಗೆ 16ರಿಂದ 18 ಕ್ವಿಂಟಾಲ್ ಬಂದರೆ ಸಾಂಪ್ರದಾಯಿಕ ತಳಿ ಇಳುವರಿ ಎಕರೆಗೆ ಕೇವಲ 8ರಿಂದ 10 ಕ್ವಿಂಟಾಲ್. ಅಕ್ಕಿಯೇ ಪ್ರಧಾನ ಆಹಾರವಾದರೂ ಹೆಚ್ಚಿನ ರೈತ ಕುಟುಂಬಗಳು ಮಳೆಗಾಲದಲ್ಲಿ ಅಂಗಡಿ ಅಕ್ಕಿಯನ್ನೇ ಅವಲಂಬಿಸಿವೆ. ಇಲ್ಲಿನ ನಿರಾಶಾದಾಯಕ ಇಳುವರಿಗೆ ಮಣ್ಣು ಒಂದು ಕಾರಣವೆನ್ನಬಹುದು. ಕರಾವಳಿಯುದ್ದಕ್ಕೂ ಮರಳು ಮಿಶ್ರಿತ ಜೇಡಿಮಣ್ಣು ಮತ್ತು ಮಲೆನಾಡಿನಲ್ಲಿ ಜಂಬಿಟ್ಟಿಗೆ ಮಣ್ಣಿದ್ದರೆ, ಕಾರ್ಕಳ, ಪುತ್ತೂರು, ಬೆಳ್ತಂಗಡಿ ಸುಳ್ಯಗಳಲ್ಲಿ ಕೆಂಪು ಜೇಡಿ ಜಂಬಿಟ್ಟಿಗೆ ಮಣ್ಣನ್ನು ಕಾಣಬಹುದು. ಅತಿಯಾದ ಮಳೆ ಮಣ್ಣಿನ ಲವಣಾಂಶ ಕೊಚ್ಚಿ ಹೋಗಿ ಮಣ್ಣಿನಲ್ಲಿ ಆಮ್ಲತೆ ಕಂಡುಬರುತ್ತದೆ. ಎಲ್ಲ ಪೋಷಕಾಂಶಗಳ ಕೊರತೆ ಇರುವ ಈ ಮಣ್ಣು ಯಾವುದೇ ಬೆಳೆಗೆ ಫಲವತ್ತಾದುದಲ್ಲ.

ದಕ್ಷಿಣ ಕನ್ನಡದಲ್ಲಿ ಮಲೆನಾಡಿನ ಉಳಿದ ಯಾವುದೇ ಪ್ರದೇಶಗಳಲ್ಲಿ ಕಾಣದ ಧನಿ-ಒಕ್ಕಲು ವರ್ಗವನ್ನು ಕಾಣಬಹುದು. ಭೂಮಾಲಿಕರಿಗೆ ಅನುಪಾತಕ್ಕೆ ಬರುವ ಮೊದಲೂ ಇಂತಹ ಪ್ರಭೇದ ಉಳಿದ ಜಿಲ್ಲೆಗಳಲ್ಲಿಲ್ಲ. ಅಲ್ಲಿ ಏನಿದ್ದರೂ ದೊಡ್ಡ ಹಿಡುವಳಿದಾರರು–ಸಣ್ಣ ಹಿಡುವಳಿದಾರರು. ಜಮೀನ್ದಾರರು–ಕೃಷಿಕೂಲಿ ಕಾರ್ಮಿಕರೆಂಬ ವರ್ಗ. ಜಿಲ್ಲೆಯಲ್ಲಿ ಉಳುವವನೇ ನೆಲದೊಡೆಯನಾದರೂ ಧನಿ-ಒಕ್ಕಲು ವರ್ಗ ವ್ಯವಸ್ಥೆ ಸುಪ್ತವಾಗಿ ಜ್ವಲಂತವಾಗಿದೆ. ಸಾಮಾಜಿಕ ರಾಜಕೀಯ ಕ್ಷೇತ್ರದಲ್ಲಿ ಆಗಾಗ ಇದು ಕಾಣಿಸಿಕೊಂಡು ಸ್ಫೋಟಗೆ ಕಾರಣವಾಗುವುದುಂಟು. ನೆಲದ ಒಡೆತನ ರೈತರ ಜೀವನಮಟ್ಟವನ್ನು ನಿರೀಕ್ಷಿತ ಮಟ್ಟದಲ್ಲಿ ಸುಧಾರಿಸಲಿಲ್ಲ. ಬದಲಿಗೆ ಅವರಲ್ಲಿ ಸೋಮಾರಿತನ ಮತ್ತು ಕುಡಿತ-ಕೋಳಿ ಅಂಕಗಳತ್ತ ಕೆಟ್ಟ ದುರಭ್ಯಾಸಗಳನ್ನು ಅಪ್ಪಿಕೊಳ್ಳಲು ಕಾರಣವಾಯಿತು.

With best compliments from :

TUNGBHADRA SUGAR WORKS PRIVATE LIMITED

Registered Office:
11th Floor, BAKHTAWAR,
Nariman Point, BOMBAY-400 021.

P. O. Box No. 2
SHIMOGA-577 201

MANUFACTURERS OF
WHITE CRYSTAL SUGAR
CATTLE FEED MOLASSES
AND
SUGARCANE UNLOADERS
TO UNLOAD SUGARCANE
FROM LORRIES

Grams: MERCHANDIS

Phone: 2591 (3 Lines) 3207 & 3210

ಶೋಷಣೆಗೆ ಸಿಕ್ಕಿದ ಕಾಫಿ ಪ್ಲಾಂಟರ್

ಸುಂದರ ಮಲೆನಾಡಿನ ಕಾಫಿ ಬೆಳೆಗಾರರು ಒಂದೆಡೆ ಕಾರ್ಮಿಕರನ್ನು ಶೋಷಣೆ ಮಾಡುತ್ತಿದ್ದರೆ ಇನ್ನೊಂದೆಡೆ ತಾವೇ ಸರಕಾರದ ಶೋಷಣೆಗೆ ಸಿಕ್ಕಿ ತತ್ತರಿಸುತ್ತಿದ್ದಾರೆ. ಶೇಕಡ 98 ರಷ್ಟಿರುವ ಸಣ್ಣ ಪ್ಲಾಂಟರುಗಳು ಶ್ರೀಮಂತ ಪೋಷಾಕು ತೊಟ್ಟರೂ ಅಂತರಂಗದಲ್ಲಿ ಸಮಸ್ಯೆಗಳ ಜಂಜಡಕ್ಕೆ ಸಿಲುಕಿದ್ದಾರೆ.



ಲೋಕ ಸಭೆಯಲ್ಲಿ ಇತ್ತೀಚೆಗೆ ಕಾಫಿ ಬೆಳೆಗಾರರ ಸಮಸ್ಯೆಗಳ ಬಗ್ಗೆ ಲೋಕ ಸಭಾ ಸದಸ್ಯ ಡಿ. ಕೆ. ತಾರಾದೇವಿಯವರು ಮಾತನಾಡತೊಡಗುತ್ತಿದ್ದಂತೆಯೇ ಉಳಿದ ಬಹುತೇಕ ಸದಸ್ಯರೆಲ್ಲಾ ನಕ್ಕು ಬಿಟ್ಟರು. ಕಾಫಿ ಬೆಳೆಗಾರರೆಲ್ಲಾ ಶ್ರೀಮಂತರು ಎಂಬುದು ಅವರೆಲ್ಲರ ನಂಬಿಕೆ. ಅವರಿಗೂ ಸಮಸ್ಯೆಗಳಿರುತ್ತವೆಂಬುದು ಅವರ ನಗುವಿಗೆ ಕಾರಣವಾಗಿತ್ತು.

ಹೌದು. ಕಾಫಿ ಬೆಳೆಗಾರರು ಸುಖೀ ಪುರುಷರು. ಆದರೆ ಎಲ್ಲರೂ ಎಂದರೆ ತಪ್ಪಾಗುತ್ತದೆ. ನೂರಾರು ಸಾವಿರಾರು ಎಕರೆ ತೋಟಗಳನ್ನು ಹೊಂದಿರುವ ಶೇಕಡ 2ರಷ್ಟು ಕಾಫಿ ಬೆಳೆಗಾರರು ಮಾತ್ರ ಸುಖೀ ಪುರುಷರಾಗಿದ್ದಾರೆ. ಉಳಿದ ಶೇಕಡ 98 ರಷ್ಟಿರುವ ಸಣ್ಣ ಬೆಳೆಗಾರರು ಸಾಲ ಸಾಲದ ಹಂಗಿನಲ್ಲೇ ತೊಳಲಾಡುತ್ತಿದ್ದು, ನೂರಾರು ಸಮಸ್ಯೆಗಳ ಆಗರವಾಗಿದ್ದಾರೆ.

ದೊಡ್ಡ ಬೆಳೆಗಾರರನ್ನು ಅನುಕರಣೆ ಮಾಡುವ ಪಂಕ್ತಿನಲ್ಲಿ ಬಹಳಷ್ಟು ಸಣ್ಣ ಬೆಳೆಗಾರರು ಕಾಫಿ ಮಂಡಳಿಯಿಂದ ಬೆಳೆ ಅಭಿವೃದ್ಧಿಗೆಂದು ಸಾಲ ಪಡೆದು ತಮ್ಮ ಐಷಾರಾಮದ ಬದುಕಿಗೆ ಉಪಯೋಗಿಸಿ ಕೊಳ್ಳುತ್ತಾರಷ್ಟೆ. ಕಾಫಿ ಪ್ಲಾಂಟೇಷನ್‌ಗಳಿರುವ ಮಲೆನಾಡಿನ ರಸ್ತೆಗಳಲ್ಲಿ ಓಡಾಡುವ ಬಹುತೇಕ ವಾಹನಗಳು...... ಈ ರೀತಿಯ ಸಾಲದ ಕಾರುಗಳೇ...... ಮೋಟಾರು ಬೈಕ್‌ಗಳೇ......ಹಚ್ಚ ಹಸಿರಿನ ತೋಟದ ನಡುವೆ ತಲೆ ಎತ್ತಿನಿಂತಿರುವ ಬಂಗಲೆಗಳು ಕೂಡ ಇದೇ ಸಾಲಿಗೆ ಸೇರುತ್ತವೆ. ಹೊರ ನೋಟಕ್ಕೆ ಸುಂದರವಾಗಿ ಕಾಣುವ ಮಲೆನಾಡಿನ ಕಾಫಿ ತೋಟಗಳ ಬೆಳೆಗಾರರು ಒಂದೆಡೆ ಕಾರ್ಮಿಕರನ್ನು ಅಮಾನವೀಯವಾಗಿ ಶೋಷಣೆಗೊಳಪಡಿಸಿದ್ದರೆ, ಇನ್ನೊಂದೆಡೆ ತಾವೇ ಸರ್ಕಾರದ ಪರೋಕ್ಷವಾದ ಶೋಷಣೆಗೆ ಸಿಲುಕಿ ತತ್ತರಿಸುತ್ತಿದ್ದಾರೆ.

ಜಗತ್ತಿನ ಮಾರುಕಟ್ಟೆಯಲ್ಲಿ ಭಾರತದ ಕಾಫಿಗೆ ಇಂದಿಗೂ ಅಗ್ರಸ್ಥಾನವಿದೆ. ಅಪಾರ ಬೇಡಿಕೆಯಿದೆ. ಭಾರತದ ಒಳಗೆ ಶೇಕಡಾ 6ರಷ್ಟು ಕಾಫಿ ಸೇವಿಸುವವರಿದ್ದಾರೆ. ಬಾಹ್ಯ ಮತ್ತು ಆಂತರಿಕ ಮಾರುಕಟ್ಟೆಗಳೆರಡರಲ್ಲೂ ಭಾರತದ ಕಾಫಿಗೆ ಅಪಾರ ಬೇಡಿಕೆ ಇರುವುದು ಸ್ಪಷ್ಟವಾದರೂ ಕಾಫಿ ಮಂಡಳಿ' ಯನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡಿರುವ ಐ. ಎ. ಎಸ್ ಅಧಿಕಾರಿಗಳ ವಿಚಿತ್ರ ಧೋರಣೆಯಿಂದ ಸಣ್ಣ ಬೆಳೆಗಾರರು ಶೋಷಣೆಗೆ ಸಿಲುಕಿ ನರಳುತ್ತಿದ್ದಾರೆ.

ದೇಶದ ಕೆಲವೇ ಶ್ರೀಮಂತ ಬೆಳೆಗಳಲ್ಲಿ ಒಂದಾದ ಕಾಫಿಗೆ ತನ್ನದೇ ಆದ ಐತಿಹಾಸಿಕ ಹಿನ್ನೆಲೆ, ವಿಶಿಷ್ಟತೆ ಇದೆ. ಸುಮಾರು 300 ವರ್ಷಗಳ ಹಿಂದೆ ಅಂದರೆ 1670ರಲ್ಲಿ ಬಾಬಾ ಬುಡನ್ ಎಂಬ ಪ್ರಯಾಣಿಕ ಅಫ್ರಿಕಾ ಖಂಡದ ಯೆಮನ್‌ನಿಂದ 7 ಕಾಫಿ ಬೀಜಗಳನ್ನು ತಂದು ಚಿಕ್ಕಮಗಳೂರಿನ ದತ್ತಾತ್ರೇಯ ಪೀಠ ಎಂಬಲ್ಲಿ ಬಿತ್ತಿ ಭಾರತದಲ್ಲಿ ಮೊಟ್ಟ ಮೊದಲ ಬಾರಿಗೆ ಕಾಫಿ ಬೆಳೆಗೆ ನಾಂದಿ ಹಾಡಿದ.

ಅನಂತರ ಅಲ್ಲಿಗೆ ಸಮೀಪದ ಅತ್ತಿಗುಂಡಿಯಲ್ಲಿ ನಂತರ ಕೊಡಗು, ಕೇರಳಗಳಲ್ಲಿಯೂ ಕಾಫಿ ಬೆಳೆ ಸಣ್ಣ ಪ್ರಮಾಣದಲ್ಲಿ ನಡೆಯುತ್ತಿತ್ತು. 1820ರಲ್ಲಿ ಬ್ರಿಟಿಷರು ದೊಡ್ಡ ಕಾಫಿ ತೋಟಗಳನ್ನು ಆರಂಭಿಸಲು ಪ್ರಯತ್ನಿಸತೊಡಗಿದರು.

1822-25ರಲ್ಲಿ ಶಿವಮೊಗ್ಗದಲ್ಲಿ ಜೆಂಟ್ಲಿ ಮತ್ತು ಕಂಪೆನಿಯವರು ದೊಡ್ಡ ಕಾಫಿ ತೋಟ ಆರಂಭಿಸಿದರು. ಅನಂತರ 1830ರಲ್ಲಿ ಚಿಕ್ಕಮಗಳೂರಿನ ಮೈಲ್‌ಮನೆ ಎಂಬಲ್ಲಿ ಥಾಮಸ್ ಕ್ಯಾನನ್ ಅವರು ಇನ್ನೊಂದು ದೊಡ್ಡ ತೋಟ ನಡೆಸತೊಡಗಿದರು.

ಕಾಫಿಗೆ ಎಲ್ಲೆಡೆಯಿಂದ ಬೇಡಿಕೆ ಹೆಚ್ಚಿದಂತೆ ಇದೊಂದು ಪ್ರಮುಖ ವಾಣಿಜ್ಯ ಬೆಳೆಯಾಗಿ ಅಭಿವೃದ್ಧಿ ಹೊಂದ ತೊಡಗಿತು. ಕಾಫಿ ಬೆಳೆಯಲ್ಲೇ ಹೆಚ್ಚು ಸಂಶೋಧನೆ ನಡೆಯ ತೊಡಗಿತು. 1911ರಲ್ಲಿ ಆಲ್ದೂರಿಗೆ ಸಮೀಪದಲ್ಲಿನ ದೊಡ್ಡಮನೆ ಗುಡ್ಡ ತೋಟದಲ್ಲಿ ಕೆಂಟ್ ಎಂಬವರು 'ಅರೆಬಿಕಾ ಕಾಫಿ'ಯ ಹೊಸ ತಳಿಯನ್ನು ಕಂಡು ಹಿಡಿದರು. ಮುಂದೆ ಇದು 'ಕೆಂಟ್ ಕಾಫಿ' ಎಂದೇ ಜನಪ್ರಿಯಗೊಂಡಿತು.

1893ರಲ್ಲಿ ಯುನೈಟೆಡ್ ಪ್ಲಾಂಟರ್ಸ್ ಅಸೋಸಿಯೇಷನ್ ಆಫ್ ಸದರ್ನ್ ಇಂಡಿಯ (ಉಪಾಸಿ) ಸಂಸ್ಥೆ ಆರಂಭಗೊಂಡು ಇದು ಕಾಫಿ ಬೆಳೆಯಲ್ಲಿ ಹೊಸ ಸಂಶೋಧನೆಗಳನ್ನು ನಡೆಸುವುದಕ್ಕೆ ಹೆಚ್ಚು ಮಹತ್ವ ನೀಡಿತು.

ಈ ಹಿನ್ನೆಲೆಯಲ್ಲಿ ಮೈಸೂರಿನ ಮಹಾರಾಜರು ಬಾಳೆಹೊನ್ನೂರಿನಲ್ಲಿ ಕಾಫಿ ಸಂಶೋಧನಾ ಕೇಂದ್ರವನ್ನು ಆರಂಭಿಸಿದರು. 1925ರಲ್ಲಿ ಡಾ| ಲೆಸ್ಲಿ ಕೋಲ್‌ಮನ್ ಅವರ ಪ್ರಯತ್ನದಿಂದ ಕೇವಲ 19 ಎಕರೆ ಸ್ಥಳದಲ್ಲಿ ಆರಂಭಗೊಂಡ ಈ ಸಂಶೋಧನಾ ಕೇಂದ್ರ ಇಂದು 119.86 ಹೆಕ್ಟೇರ್ ಸ್ಥಳವನ್ನು ಹೊಂದಿದ್ದು ದೇಶದ ಪ್ರಮುಖ ಕಾಫಿ ಸಂಶೋಧನ ಕೇಂದ್ರವಾಗಿ ಬೆಳೆದು ನಿಂತಿದೆ.

ಸಮುದ್ರ ಮಟ್ಟದಿಂದ 2,500 ರಿಂದ 3,500 ಅಡಿಗಳ ಎತ್ತರದ ಇಳಿಜಾರು ಪ್ರದೇಶಗಳ ತಂಪು ಹವೆಯ ಸ್ಥಳಗಳಲ್ಲಿ ಬೆಳೆಯುವ ಕಾಫಿ ಸಸಿಗಳನ್ನು ಜೂನ್, ಜುಲಾಯಿ, ಅಗಸ್ಟ್ ತಿಂಗಳುಗಳಲ್ಲಿ ನೆಡಲಾಗುತ್ತದೆ. ನಂತರ ಎರಡನೆ ವರ್ಷದಲ್ಲಿ ಚಿಗುರು ತೆಗೆಯಬಹುದು. ಮೂರನೇ ವರ್ಷದಲ್ಲಿ ಸ್ವಲ್ಪ ಪ್ರಮಾಣದಲ್ಲಿ ಬೀಜಗಳು ಸಿಗುತ್ತದೆ. ನಾಲ್ಕನೇ ವರ್ಷದಿಂದ ಪೂರ್ಣ ಫಸಲು ಬರತೊಡಗುತ್ತದೆ.

ಮಾರ್ಚ್ ಎಪ್ರಿಲ್ ತಿಂಗಳಲ್ಲಿ ಕಾಫಿ ಗಿಡಗಳಲ್ಲಿ ಮೊಗ್ಗುಗಳು ಬೆಳ್ಳಗೆ ಹೂವಾಗಿ ಅರಳಿ ಬೀಜವಾಗಿ ನವೆಂಬರ ಡಿಸೆಂಬರ ತಿಂಗಳುಗಳಲ್ಲಿ ಕೆಂಪನೆ ಹಣ್ಣಾಗಿ ಕೊಯ್ಯಲು ತಯಾರಾಗಿರುತ್ತವೆ.

ಹಣ್ಣುಗಳನ್ನು ಕಿತ್ತ ನಂತರದ ದಿನವೇ ಅವುಗಳನ್ನು ಪಲ್ಪ್ ಮಾಡಿ ಸಿಪ್ಪೆಗಳನ್ನು ಬೇರ್ಪಡಿಸಿ 6ರಿಂದ 8 ದಿನಗಳ ಕಾಲ ಬಿಸಿಲಿನಲ್ಲಿ ಒಣಗಿಸಲಾಗುವುದು. ನಂತರ ಬೀಜಗಳನ್ನು ಚೀಲಗಳಲ್ಲಿ ತುಂಬಿ ಸಮೀಪದ ಕಾಫಿ ಸಂಗ್ರಹಣಾ ಕೇಂದ್ರಗಳಿಗೆ ಒಯ್ಯಲಾಗುತ್ತದೆ.

ಜಗತ್ತಿನಲ್ಲಿ ಬ್ರೆಜಿಲ್ ಸೇರಿದಂತೆ ಬಹಳಷ್ಟು ಲ್ಯಾಟಿನ್ ಅಮೆರಿಕ ಮತ್ತು ಆಫ್ರಿಕಾ ಖಂಡದ ರಾಷ್ಟ್ರಗಳು ಕಾಫಿಯನ್ನು ಉತ್ಪಾದಿಸುತ್ತವೆ. ವಿಶ್ವ ಮಾರುಕಟ್ಟೆಯಲ್ಲಿ ಭಾರತದ ಕಾಫಿಯ ಗುಣಮಟ್ಟ ಹೆಚ್ಚಿನದಾಗಿದೆ. ವಿಶ್ವ ಮಾರುಕಟ್ಟೆಯಲ್ಲಿ ಬ್ರೆಜಿಲ್ ಅಗ್ರಸ್ಥಾನದಲ್ಲಿದೆ.

ಭಾರತದ ಕಾಫಿಯ ಮಾರುಕಟ್ಟೆ ವ್ಯವಸ್ಥೆ ಸಂಪೂರ್ಣವಾಗಿ 'ಕಾಫಿ ಮಂಡಳಿ'ಯ ಹಿಡಿತದಲ್ಲಿದೆ.

1930ರ ಹಣದುಬ್ಬರ, ಎರಡನೆಯ ಮಹಾಯುದ್ಧಗಳ ಪರಿಣಾಮಗಳಿಂದಾಗಿ, ವಿಶ್ವ ಮಾರುಕಟ್ಟೆಯ ಏರಿಳಿತಗಳಿಂದಾಗಿ, ಭಾರತದ ಕಾಫಿ ಬೆಳೆಗಾರರು ತತ್ತರಿಸಿದ್ದರು. 1937ರಲ್ಲಿ ಕಾಫಿಯ ಮಾರುಕಟ್ಟೆ ವ್ಯವಸ್ಥೆಗೆ ಸಹಾಯ ಮಾಡಲು ಬ್ರಿಟಿಷ್ ಸರ್ಕಾರ ಕಾಫಿ ಸೆಸ್ ಸಮಿತಿಯನ್ನು ಸ್ಥಾಪಿಸಿತು.

ಅನಂತರ ಕಾಫಿಯ ಆಂತರಿಕ ಮತ್ತು ಬಾಹ್ಯ ಮಾರುಕಟ್ಟೆಗಳನ್ನು ನಿಯಂತ್ರಿಸುವ ನಿಟ್ಟಿನಲ್ಲಿ 1940ರಲ್ಲಿ ಕಾಫಿ ಮಾರುಕಟ್ಟೆ ವಿಸ್ತರಣಾ ಮಂಡಳಿಯನ್ನು ಸ್ಥಾಪಿಸಲಾಯಿತು. 1941ರಲ್ಲಿ ಇದು ಕಾಫಿ ಮಂಡಳಿಯಾಗಿ ರೂಪುಗೊಂಡು ಇಂದಿಗೂ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಾ ಬರುತ್ತಿದೆ.

ಬೆಳೆಗಾರರು ತಾವು ಬೆಳೆದ ಕಾಫಿಯನ್ನು ಸಮೀಪದ ಕಾಫಿ ಸಂಗ್ರಹಣಾ ಕೇಂದ್ರಗಳಿಗೆ ನೀಡಿದ ನಂತರ ಅಲ್ಲಿಂದ ಕಾಫಿ ಕ್ಯೂರಿಂಗ್ ವರ್ಕ್ಸ್‌ಗಳಿಗೆ ಕಳುಹಿಸಲಾಗುತ್ತದೆ. ಈ ಕೇಂದ್ರ ಮತ್ತು ಕ್ಯೂರಿಂಗ್ ವರ್ಕ್ಸ್‌ಗಳೆಲ್ಲಾ ಖಾಸಗಿ ವ್ಯಕ್ತಿಗಳ ಹಿಡಿತದಲ್ಲಿದ್ದು ಕಾಫಿ ಮಂಡಳಿಯಿಂದ ಕಮಿಷನ್ ತೆಗೆದುಕೊಂಡು ಕೆಲಸ ಮಾಡುತ್ತವೆ.

ನಂತರ ಇಲ್ಲಿಂದ ಸಂಸ್ಕರಿಸಲ್ಪಟ್ಟ ಕಾಫಿ ಬೀಜಗಳನ್ನು ಆಂತರಿಕ ಮತ್ತು ಬಾಹ್ಯ ಮಾರು ಕಟ್ಟೆಗಳಿಗೆ ಬಿಡುಗಡೆ ಮಾಡಲಾಗುತ್ತದೆ. ಹರಾಜು ಕೇಂದ್ರಗಳಲ್ಲಿ ಈ ವಹಿವಾಟು ನಡೆಯುತ್ತದೆ.

ಪಿ. ಜಿ. ವಿಜು ಪೂಣಚ್ಚ

ಕಾಫಿ ಮಂಡಳಿಯು ಕಾಫಿ ಬೆಳೆಗಾರರಿಗೆ ನಾನಾ ತರದ ಸಾಲ ಸೌಲಭ್ಯಗಳನ್ನು ಒದಗಿಸುತ್ತದೆ. ಸಸಿ ನೆಡುವುದಕ್ಕಾಗಿ, ಫಸಲು ಬಂದ ಸಮಯದಲ್ಲಿ ಕಾರ್ಮಿಕರಿಗೆ ಕೂಲಿ ನೀಡುವ ಸಲುವಾಗಿ ದೀರ್ಘಾವಧಿ ಮತ್ತು ಅಲ್ಪಾವಧಿ ಇತ್ಯಾದಿ ಹಲವಾರು ಸಾಲ ಸೌಲಭ್ಯಗಳನ್ನು ನೀಡುತ್ತದೆ.

ಪ್ರಸ್ತುತ ಕಾಫಿ ಮಂಡಳಿಯು ಬೆಳೆಗಾರರ ಸಮಸ್ಯೆಗಳ ಅರಿವೇ ಇಲ್ಲದಂತಿದೆ ಎಂದರೆ ಅತಿಶಯೋಕ್ತಿ ಎನಿಸದು. ಈ ಮಂಡಳಿಯಲ್ಲಿ ಕೇವಲ 3 ಮಂದಿ ಬೆಳೆಗಾರರ ಪ್ರತಿನಿಧಿಗಳಿದ್ದು ಇವರೆಲ್ಲಾ ದೊಡ್ಡ ಬೆಳೆಗಾರರು.ಸರ್ಕಾರದ 10 ಮಂದಿ ಪ್ರತಿನಿಧಿಗಳು ಬಂಡವಾಳ ಶಾಹಿಗಳ, ವಿಶ್ವಮಾರುಕಟ್ಟೆಗಳ ಏಕಸ್ವಾಮ್ಯ ಸಾಧಿಸಿರುವ ಪ್ರಭುಗಳ ಕೈಗೊಂಬೆಗಳಾಗಿದ್ದು ಭಾರತದಲ್ಲಿ ಶೇಕಡ 98 ರಷ್ಟಿರುವ ಸಣ್ಣ ಬೆಳೆಗಾರರನ್ನು ಸುಲಿಗೆ ಮಾಡುತ್ತಿದ್ದಾರೆ.

ಮಲೆನಾಡಿನ ಬಹುತೇಕ ಕಡೆಗಳಲ್ಲಿ ಕಾಫಿ ಮಂಡಳಿಯ ಬಗ್ಗೆ ಸಣ್ಣ ಬೆಳೆಗಾರರ ಅಸಮಾಧಾನವನ್ನು ಗಮನಿಸಬಹುದು. ಕೆಲವು ಬೆಳೆಗಾರರು "ತೋಟ ಬೇಡ ಮಾರಾಯರೇ... ನಗರಗಳಿಗೆ ಹೋಗಿ ಯಾವುದಾದರೂ ವ್ಯಾಪಾರ ಮಾಡೋದು ಒಳ್ಳೇದೆನಿಸುತ್ತೆ" ಎಂದು ಗೊಣಗುವುದನ್ನು ಕೇಳಬಹುದು.

"ಒಂದು ಕಡೆ ಕಾರ್ಮಿಕರ ವೇತನ ಹೆಚ್ಚಾದರೆ ಮತ್ತೊಂದೆಡೆ ಗೊಬ್ಬರಕ್ಕೆ ಬೆಲೆ ಜಾಸ್ತಿಯಾಗುತ್ತದೆ. ಒಂದು ತಿಂಗಳು ಕೆಲಸ ನಿಲ್ಲಿಸಿದರಂತೂ ತೋಟವೇ ಹಾಳಾಗಿ ಬಿಡುತ್ತೆ. ಎಲ್ಲವೂ ಸರಿಯಾಯ್ತೆಂದರೆ ಸಕಾಲದ ಮಳೆಯೇ ಕೈಕೊಡುತ್ತದೆ ಎಂಬುದು ಮಾಕೋನಹಳ್ಳಿಯ ಕಾಫಿ ಬೆಳೆಗಾರ ದಿನೇಶ್‌ರ ಅಭಿಪ್ರಾಯ.

ವಿಶ್ವ ಮಾರುಕಟ್ಟೆಯ ಮಾರುಕಟ್ಟೆಗೆಂದ ರೋಸಿಹೋದ ಕೊಡಗಿನ ಕಿಚ್ಚಿಟ್ಟಿದ ಬೆಳೆಗಾರ ವೀರರಾಜ್ ಅವರು ಕಾಫಿ ಬೆಳೆಗೆ ಕೈಹಾಕಿದರು. ಅದೂ ಕೂಡಾ ಕೆಲವು ಹಂತಗಳಲ್ಲಿ ನಷ್ಟದ ಬಾಬತ್ತೆಂದು ಅರಿವಾಗಿ ತೋಟದಲ್ಲಿದ್ದ ಮರಗಳನ್ನೆಲ್ಲ ಮರವ್ಯಾಪಾರಿಗಳಿಗೆ ವಹಿವಾಟು ಮಾಡಿ ಕಾಫಿ ತೋಟ ಆರಂಭಿಸಲು ಮಾಡಿದ್ದ ಸಾಲ ವನ್ನೆಲ್ಲಾ ತೀರಿಸಿ ಈಗ ಬಾಳೆಯ ಕೃಷಿಗೆ ಇಳಿದಿದ್ದಾರೆ.

ಮಲೆನಾಡಿನ ಕೆಲವು ಕಡೆ ಕಾಫಿ ಬೆಳೆಗಾರರು ತಮ್ಮ ತೋಟಗಳನ್ನು ಮದಂಬಾಸಿಂದ ಕಪ್ಪು ಹಣ ಹಿಡಿದುಕೊಂಡು ಬರುವ ಚಿಟ್ಟಿಯಾರರುಗಳಿಗೆ ಮಾರಿ ನಗರ ಸೇರುತ್ತಿದ್ದಾರೆ.

ಕಾಫಿ ಮಂಡಳಿಯು ಒಂದು ಟನ್ ಕಾಫಿಯನ್ನು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ 40 ಸಾವಿರ ರೂ.ಗಳಿಗೆ ಮಾರುತ್ತದೆ. ಆದರೆ ಅದು ಬೆಳೆಗಾರರಿಗೆ ನೀಡುವುದು ಕೇವಲ 16 ಸಾವಿರ ರೂ.ಗಳನ್ನು ಮಾತ್ರ! ಇದು ಕಾಫಿ ಬೆಳೆಗಾರರ ಶೋಷಣೆಯ ಒಂದು ಸ್ಯಾಂಪಲ್ ಅಷ್ಟೆ.

ಕಲಬೆರಕೆ

ಆಂತರಿಕ ಮಾರುಕಟ್ಟೆಗಳಲ್ಲಂತೂ ಇತ್ತೀಚೆಗೆ ತಾಜಾ ಕಾಫಿ ಸಿಗುವುದೇ ಅಪರೂಪ. ಎಲ್ಲೆಡೆ ಹುಣಸೇ ಬೀಜ, ಚಿಕೋರಿಗಳನ್ನು ಕಲಬೆರಕೆ ಮಾಡಿದ ಕಾಫಿಯೇ ಸಿಗುತ್ತಿದೆ. ಈ ವಿಷಯಗಳ ಬಗ್ಗೆಯಾದರೂ ಕಾಫಿ ಮಂಡಳಿ ನಿಯಂತ್ರಣ ಹೇರಬಹುದಾದರೂ ಅಲ್ಲಿಯೂ ವಿಫಲಗೊಂಡಿದೆ.

ದೊಡ್ಡ ಬೆಳೆಗಾರರ ಸಂಘವಾದ ಕರ್ನಾಟಕ ಪ್ಲಾಂಟರ್ಸ್ ಅಸೋಸಿಯೇಷನ್ ಇತ್ತೀಚೆಗೆ ಹೊಸ ಯೋಜನೆಯೊಂದನ್ನು ಪ್ರಕಟಿಸಿದೆ. ಅಂದರೆ ಕಾಫಿ ಬೆಳೆಗಾರರಿಗೆ ಪ್ರಸ್ತುತ ಕಾಫಿ ಮಂಡಳಿ ಟನ್‌ಗೆ 16 ಸಾವಿರ ರೂ. ನೀಡುತ್ತಿರುವುದಕ್ಕೆ ಎದುರಾಗಿ ಕೆ. ಪಿ. ಎ. 20 ಸಾವಿರ ರೂ. ನೀಡುತ್ತದೆಂದೂ, ಕಾಫಿ ಬೆಳೆಗಾರರೇ ತಮ್ಮ ಬೆಳೆಯ ಶೇಕಡ 20 ರಷ್ಟನ್ನು ಉಳಿಸಿಕೊಳ್ಳಲೂ ಅನುಮತಿ ನೀಡುತ್ತದೆಂದೂ ಅದು ಹೇಳಿದೆ. ಕಾಫಿಮಂಡಳಿಯ ಹಿಡಿತವನ್ನು ಸಡಿಲಗೊಳಿಸಿ ಅಂತರಾಷ್ಟ್ರೀಯ ವಹಿವಾಟನ್ನು ತಾವೇ ಹಿಡಿದುಕೊಂಡು ಅಪಾರ ಲಾಭಗಳಿಸುವ ಹುನ್ನಾರ ಇದಾಗಿದೆ.

ಈ ಯೋಜನೆ ಏನಾದರೂ ಕಾರ್ಯರೂಪಕ್ಕೆ ಬಂದರೆ ಈಗ ಎಲಕ್ಕಿ ಬೆಳೆಗಾರರು ಎದುರಿಸುತ್ತಿರುವ ಬೆಲೆಗಳ ಏರಿಳಿತಗಳ ಅನಿಶ್ಚಿತ ಮಾರುಕಟ್ಟೆಯ ಸ್ಥಿತಿಯೇ ಕಾಫಿ ಬೆಳೆಗಾರರಿಗೂ ಉಂಟಾಗುತ್ತದೆ.

ಒಟ್ಟಾರೆ ಶ್ರೀಮಂತ ಪೋಷಾಕು ತೊಟ್ಟ ಮಲೆನಾಡ ಕಾಫಿ ಬೆಳೆಗಾರರು ಅಂತರಂಗದಲ್ಲಿ ನೂರಾರು ಸಮಸ್ಯೆಗಳ ಜಂಜಡಕ್ಕೆ ಸಿಲುಕಿ ತತ್ತರಿಸುತ್ತಿದ್ದಾರೆ. •

3ನೇ ವರ್ಷಕ್ಕೆ ಪಾದಾರ್ಪಣೆಗೈಯುತ್ತಿರುವ
‘ಮುಂಗಾರು’ವಿಗೆ
ಹಾರ್ದಿಕ ಶುಭಾಶಯಗಳು

ಕೆ. ಗಂಗಾಧರ ಗೌಡ
ಮಾಜಿ ವಾರ್ತಾ ಸಚಿವರು
ಬೆಳ್ತಂಗಡಿ

ಮಲೆ ಕುಡಿಯರು

(18ನೇ ಪುಟದಿಂದ)

ದಂತೆ ತಡೆಯೊಡ್ಡುತ್ತಿದ್ದರು. ಅಳಿಯಕಟ್ಟಿನ ಮಲೆಕುಡಿಯರಿಂದ ಹೆಣ್ಣು ತಂದರೆ ಪದ್ಧತಿ ಪ್ರಕಾರ ಮಕ್ಕಳನ್ನು ಮರಳಿಸುವ ವಿಧಿಯಿರುವುದರಿಂದ, ಮಲೆಕುಡಿಯರ ಸಂಬಂಧ ಮಾಡದಂತೆ ತಡೆಹಿಡಿಯುತ್ತಿದ್ದರು. ಈ ಎಲ್ಲಾ [illegible] ಒನ್ನಲೆಯಲ್ಲಿ ಅವಲೋಕಿಸಿದರೆ ನಾಲ್ಕಲೆಯುವರು ಮಾತ್ರಾನುಸರಿಸುವ 'ಮಕ್ಕಳ [illegible]' [illegible] ಮಾಡುವ [illegible] ಸಿದ್ಧಾಂತವೇ ಮೂಲಕಾರಣವಾಗಿದೆ. [illegible] ಬೆಳ್ಳಿ-ಇಳಜಾರುಗಳಲ್ಲಿ ವಾಸವಾಗಿದ್ದ ಮಲೆಕುಡಿಯರ ಒಂದು ಪಂಗಡ ಪರಕೀಯ ಹಸ್ತಕ್ಷೇಪದ ಕಾರಣದಿಂದ ಮತ್ತು ಸ್ವಾರ್ಥಸಾಧಕ ಬುದ್ಧಿಯಿಂದ [illegible] ಮಲೆಕುಡಿಯರು ಮತ್ತು ನಾಲ್ಕಲೆಯುವರು ಎಂದು [illegible] ವಿಂಗಡಣೆಗೊಂಡಿತು. ಮಲೆಕುಡಿಯರು ಮತ್ತು ನಾಲ್ಕಲೆಯುವರು ಹೀಗೆ ದೂರವಾದಬೇರೆಯಾದ [illegible] ಒಂದೆ ಐತಿಹಾಸಿಕ ಸತ್ಯ ಅಡಗಿದೆ. ಥರ್ಸ್ಟನ್ [illegible]ಗಳಲ್ಲಿ, ಗೆಜೆಟಿಯರ್‌ನಲ್ಲಿ ಈ ಬಗ್ಗೆ ಮಾಹಿತಿ [illegible] ಅಚ್ಚರಿಯಲ್ಲಿ.

ನೆಲಸಂಪರ್ಕಕ್ಕೆ ಸಂಚಕಾರ

ಮಲೆಕುಡಿಯ ಜನಾಂಗದ ಇತಿಹಾಸದ ಮೂರ [illegible] ನೇಗಿಲು, [illegible] ಬಳಸ [illegible] ಹತ್ತಾರು ಯೋಜನೆಗಳು, ಶಿಕ್ಷಣ ಪ್ರಸಾರ, ನೇಮಕಾತಿ ನಿಯಮಗಳು – ಇವುಗಳೆಲ್ಲ ಮಲೆ ಕುಡಿಯುವರನ್ನು ತಟ್ಟದೆ ಬಿಡಲಿಲ್ಲ. ಅನೇಕ ಬಗೆಯ ಸಮೀಕ್ಷೆಗಳು. ಜಾತಿ ಆಧಾರಿತ ಪಟ್ಟಿಗಳ ನೆರಳಲ್ಲಿ ಸರಕಾರ ಘೋಷಿಸಿದ ರಿಯಾಯಿತಿಗಳು ಅಷ್ಟೊ ಇಷ್ಟೋ ದಕ್ಕಿತೆನ್ನಬೇಕು. ಇಲ್ಲಿ ನಾವು ಓದುಗರ ಗಮನ ಸೆಳೆಯಬೇಕಾದ ಚರ್ಚೆಯ ಭಾಗವಿದೆ. ಒಂದು ಜಾನಪದ ವಲಯ, ಅದರೊಳಗಿನ ಜನಜೀವನ, [illegible], ಆರ್ಥಿಕ ಮೂಲಗಳು, ಪರಿಸರ ಸಂಪತ್ತು, ಸಾಮಾಜಿಕ ಪರಿಕಲ್ಪನೆ, ನಂಬಿಕೆಗಳು, [illegible] ಮತ್ತು ಅನುಭವ, ಸಾಂಪ್ರದಾಯಿಕ [illegible] [illegible] ಭಾರತ ದೇಶದ ಉದ್ದಗಲದಲ್ಲಿ ಸಾವಿರ ಕೋಟಿ ಕೋಟಿ ರೂಪಾಯಿಗಳ ಯೋಜನೆಗಳು ಜೀವಂತ ಸಾಕ್ಷಿಗಳಾಗಿವೆ. ಆದುದರಿಂದ ಜಾನಪದ ಅಧ್ಯಯನ ಹೇಗೆ ಒಂದು ದೇಶದ ಇತಿಹಾಸ ರಚನೆಗೆ ಅಗತ್ಯದ ಆಕರಗಳಾಗಬಲ್ಲವೋ ಅದೇ ರೀತಿ ಉಜ್ವಲ ನಾಳೆಯ ನಿರ್ಮಾಣಕ್ಕೆ ಪೂರಕವಾಗಬಲ್ಲುದು. ಬೆತ್ತ, ಬೀಳಲುಗಳಿಂದ ಅತ್ಯಂತ ನಾಜೂಕಾಗಿ ವಿವಿಧ ವಿನ್ಯಾಸಗಳಲ್ಲಿ ಬುಟ್ಟಿ ಹೆಣೆಯುವ ಮಲೆ ಕುಡಿಯ ಕುಶಲರಿಗೆ ಆ ವೃತ್ತಿಗೆ ಅನುಕೂಲವಾಗುವಂತೆ ಮತ್ತು ಅದೊಂದು ಲಾಭದಾಯಕ ಉದ್ಯೋಗವಾಗುವಂತೆ ಯೋಜನೆಗಳನ್ನು ರೂಪಿಸುವ ಐತಿಹಾಸಿಕ ಅಗತ್ಯವಿತ್ತು. [illegible] ಹೀಗೆ ಪ್ರತಿ ಪಾದಿಸುತ್ತಿದ್ದೇನೆ ಎಂದು ಭಾವಿಸಲಾರದು. ಬಡತನ ಅಜ್ಞಾನಗಳಲ್ಲಿ ಮಲೆ ಕುಡಿಯರನ್ನು ಅದುಮಿ ಹಿಡಿಯುವ ಪ್ರತಿಗಾಮಿ ಧೋರಣೆ ನನ್ನದಲ್ಲ. ವಿಶಿಷ್ಟ ಪರಿಸರ, ಸಾಂಸ್ಕೃತಿಕ ಹಿನ್ನಲೆ, ದುಡಿಮೆ ಮತ್ತು ನೈಪುಣ್ಯ, ಸ್ಥಾಪಿತ ಅನುಭವಗಳನ್ನು ಪೂರ್ತಿಯಾಗಿ ಕಡೆಗಣಿಸಿ ನಡೆಸುವ ಯಾವುದೇ ಪ್ರಯೋಗ ಆತಂಕಗಳನ್ನಷ್ಟೇ ತರಬಲ್ಲುದು. ದೈಹಿಕ ಮತ್ತು ಮಾನಸಿಕ ಶಕ್ತಿಯ ಅಪವ್ಯಯ ಮಲೆ ಕುಡಿಯರಲ್ಲಿ ನಡೆದಿದೆ ಎಂಬುದೇ ನನ್ನ ಚಿಂತೆ. ಮಲೆ ಕುಡಿಯರು ಅಥವಾ ನಾಲ್ಕಲೆಯುವರು ವಾಸವಾಗಿದ್ದ ಅವಬ್ಬಮಲೆ, ಬಾಂಜಾರುಮಲೆ, ಎಲಿಮಲೆ ಮತ್ತು ಬಾರಿಮಲೆಗಳ ಅರಣ್ಯ ಉತ್ಪತ್ತಿ ಮತ್ತು ಅವರ ಸಂಗ್ರಹಕಾರ್ಯ ಹಾಗೂ ಕಚ್ಚಾ ವಸ್ತುಗಳ ಬಳಕೆಯ ಹಕ್ಕನ್ನು ಅಲ್ಲಿಯ ಮೂಲ ನಿವಾಸಿಗಳಾದ ಮಲೆ ಕುಡಿಯುವರಿಗೇ ಕೊಟ್ಟು ಅಗತ್ಯದ ತರಬೇತು, ಸಾಂಖಿಕ ಧನ ಸಹಾಯ, ಸಿದ್ಧ ವಸ್ತುಗಳಿಗೆ ಸೂಕ್ತ ಮಾರುಕಟ್ಟೆ, ಆರ್ಥಿಕ ಪ್ರೋತ್ಸಾಹ, ಸಹಾಯ ಧನ ಒದಗಿಸುತ್ತಿದ್ದರೆ ಅದರಿಂದ ಜನಾಂಗಕ್ಕೂ ಲಾಭವಾಗುತ್ತಿತ್ತು: ಸರಕಾರಕ್ಕೂ ಎಂಬುದಷ್ಟೇ ನನ್ನ ಅಭಿಪ್ರಾಯ. ಜಾನಪದ ವಿದ್ವಾಂಸರ "ಯೋಜನಾ ಸಿದ್ಧಾಂತ" ಈ ನನ್ನ ಅಭಿಪ್ರಾಯಕ್ಕೆ ಸಮರ್ಥನೆಯಾಗಿರುತ್ತದೆ.

[illegible]

[illegible] ಗಳ ಅಂತರ ಮತ್ತು ಅನಾಹುತಗಳು ಮಲೆ ಕುಡಿಯ ಜನಾಂಗದಲ್ಲಿಯೂ ನಡೆಯುತ್ತಿವೆ. ಒಂದು ನಾಡು ಮತ್ತು ಜನಾಂಗದ ಒಟ್ಟು ಇತಿಹಾಸದಲ್ಲಿ ಇದನ್ನು ಅನಿವಾರ್ಯವಾಗಿ ಸ್ವೀಕರಿಸಬೇಕಾಗಿದೆ. ಸಹಿಸಬೇಕಾಗಿದೆ.

ಮಲೆ ಕುಡಿಯರ ಹೆಣ್ಣು ಋತುಮತಿಯಾದರೆ ಮೂರು ದಿನ ಇಲ್ಲಿ ವಾಸಿಸಬೇಕು.